ಸೇತುಬಂಧಕಾರ್ಯಕ್ರಮ 2021

ತರಗತಿ: 5"

30 ದಿನಗಳ ಕಲಿವಿನ ಚಟುವಟಿಕೆಗಳು

ವಿಷಯ:ವಿಜ್ಞಾನ

| ಅಪೇಕ್ಷಿತ ಕಲಿವಿನ ಫಲಗಳು | ಕಲಿವಿನ ಅಂಶಗಳು | ಚಟುವಟಿಕೆಗಳು | ಚಟುವಟಿಕೆಗಳನ್ನು ನಿರ್ವಹಿಸಲುಸೂಚನೆಗಳು. |
|---|---|---|---|
| ಜೀವಿಗಳು ಜೀವಿಸಲು ಬೇಕಾಗುವ ಗಾಳಿ, ಮಣ್ಣು ಮತ್ತು ನೀರಿನ ಪ್ರಾಮುಖ್ಯತೆಯನ್ನು ವಿವರಿಸುವರು. | ಅ. ಭೂಮಿಯ ಮೇಲೆ ಜೀವಿಸಲು ಅಗತ್ಯವಾದ ಪರಿಸರಇದೆಎಂಬಮೆಚ್ಚುಗೆವ್ಯಕ್ತಪಡಿಸುವರು. | ದಿನ 1<br>ಪರಿಸರದಲ್ಲಿನವಸ್ತುಗಳಪಟ್ಟಿತಯಾರಿಕೆ. | • ತಮ್ಮಪರಿಸರದಲ್ಲಿಇರುವ ಸಜೀವಿ ಮತ್ತು ನಿರ್ಜೀವಿಗಳ ಪಟ್ಟಿಯನ್ನು ತಯಾರಿಸಲು ಹೇಳೋಣ. ಎಲ್ಲ ಮಕ್ಕಳೂ ಬರೆದಿರುವ ವಸ್ತುಗಳಲ್ಲಿಸಾಮಾನ್ಯವಾಗಿರುವ ವಸ್ತುಗಳ ಪಟ್ಟಿಯನ್ನು ತಯಾರಿಸಿ. ಮಕ್ಕಳು ಈಗ ಅವುಗಳ ಉಪಯೋಗಗಳನ್ನು ಬರೆಯಲಿ. |
| | ಆ. ಗಾಳಿ, ನೀರುಮತ್ತುಮಣ್ಣಿನಪ್ರಾಮುಖ್ಯತೆಯನ್ನುಗುರುತಿಸುವರು. | ದಿನ 2<br>ಗುಂಪುಚರ್ಚೆ ವೀಕ್ಷಣೆ.<br>ನಾನು ಬದುಕಲು ಇವರೆಲ್ಲ ಸಹಕರಿಸುವರಾ? | • ಮೇಲಿನ ಪಟ್ಟಿಯಲ್ಲಿ ಜೀವಿಗಳು ಜೀವಿಸಲು ಅಗತ್ಯವಾದ ವಸ್ತುಗಳನ್ನು ಗುರುತಿಸಲು ಅನುಕೂಲಿಸೋಣ.<br>• ಗಾಳಿ, ನೀರು ಮತ್ತು ಮಣ್ಣು ಜೀವಿಗಳಿಗೆ ಏಕೆ ಅಗತ್ಯ ಎನ್ನುವ ವಿಷಯ ನೀಡಿ, ಗುಂಪಿನಲ್ಲಿಚರ್ಚಿಸಲು ಹೇಳಿ. ಅವರ ಅಭಿಪ್ರಾಯಗಳನ್ನು ಸಂಗ್ರಹಿಸೋಣ.<br>• ಮಕ್ಕಳನ್ನುರಸ್ತೆಯ ಪಕ್ಕ ಎಚ್ಚರದಿಂದ ನಿಲ್ಲಿಸಿ. ಅಲ್ಲಿ ನಡೆಯುವ ವಿದ್ಯಾಮಾನವನ್ನುಗಮನಿಸಿ ವಿವರಿಸಲು |

| | | | |
|---|---|---|---|
| | | | ಹೇಳೋಣ. ಗಾಳಿ ಮಲಿನವಾಗುತ್ತಿರುವ ವಿವಿಧ ಸನ್ನಿವೇಶಗಳನ್ನು ಅವರಿಗೆ ಮನೋಜ್ಞವಾಗಿ ವರ್ಣಿಸಿ ಮಲಿನತೆಯನ್ನು ತಡೆಯಲು ನಾವೇನು ಮಾಡಬೇಕು ಎಂದು ಚಿಂತಿಸಲು ಅನುವು ಮಾಡೋಣ. |
| | ಇ. ಕಾಲಗಳಲ್ಲಿನಬದಲಾವಣೆಗಳನ್ನುವಿವರಿಸುವರು. | ದಿನ 3 ಹವಾಮಾನನಕ್ಷೆಯನ್ನುರಚಿಸಿರುವ ಅನುಭವದಲ್ಲಿ ಕಾಲಗಳನ್ನುಪಟ್ಟಿ ಮಾಡುವರು. ಚರ್ಚೆ ಮಾಡೋಣ ಅಲ್ಪಂತಯಾರಿಕೆ ಉಡುಪಿನ ಪ್ರದರ್ಶನ | • ಪ್ರತಿ ತಿಂಗಳಲ್ಲಿ ಹವಾಮಾನ ಹೇಗಿರುತ್ತದೆ ಎಂದು ಬರೆಯಲು ತಿಳಿಸಿ. (ಜನವರಿ - ಚಳಿ)<br>• ಚಳಿ, ಮಳೆ ಮತ್ತು ಬೇಸಿಗೆ ಹೆಚ್ಚಿರುವ ತಿಂಗಳುಗಳನ್ನು ಹೆಸರಿಸಲಿ. ಈ ಆಧಾರದಲ್ಲಿ ಚಳಿಗಾಲ, ಮಳೆಗಾಲ ಮತ್ತು ಬೇಸಿಗೆಕಾಲ ಎಂದು ವರ್ಗೀಕರಿಸಿರುವದನ್ನು ಅವರಿಗೆ ಮನನಮಾಡಿಸೋಣ.<br>• ಯಾವ ಯಾವಕಾಲದಲ್ಲಿ ಪರಿಸರವು ಹೇಗಿರುತ್ತದೆ ಎಂದು ಪಟ್ಟಿ ಮಾಡಲು ತಿಳಿಸಿ. (ಮಳೆಗಾಲ–ಮೋಡಕವಿದ ವಾತಾವರಣ, ಸಸ್ಯಗಳು ಚೆನ್ನಾಗಿ ಬೆಳೆದಿರುತ್ತವೆ, ಬೆಳೆಗಳನ್ನು ಬೆಳೆಯುತ್ತೇವೆ. ವಾತಾವರಣ ತಂಪಾಗಿರುತ್ತದೆ. ಇತ್ಯಾದಿ)<br>• ಯಾವಕಾಲದಲ್ಲಿ ಯಾವ ಯಾವ |

| | | | |
|---|---|---|---|
| | | | ಉಡುಪನ್ನು ಧರಿಸುತ್ತೇವೆ ಎನ್ನುವುದನ್ನು ಚಿತ್ರಗಳ ಆಲ್ಬಂ ತಯಾರಿಸಲು ಅಥವಾ ಆ ಉಡುಪನ್ನು ಧರಿಸಿಕೊಂಡು ಬಂದು ಪ್ರದರ್ಶಿಸಲು ಅನುವುಮಾಡೋಣ. |
| ಆಹಾರದಮೂಲಮತ್ತುಪ್ರಾಮುಖ್ಯತೆಯನ್ನುಅರ್ಥಮಾಡಿಕೊಳ್ಳುವರು. | ಅ. ವಿವಿಧಆಹಾರಗಳಮೂಲಗಳನ್ನುಪಟ್ಟಿಮಾಡುವರು. (ಸಸ್ಯಜನ್ಯ, ಪ್ರಾಣಿಜನ್ಯ) | ದಿನ 4.<br>ಗುಂಪುಆಟ ಆಡೋಣ<br>ನನ್ನ ಆಹಾರ ಎಲ್ಲಿಂದ ಬರುತ್ತದೆ.<br>ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಆಹಾರಗಳ ವರ್ಗೀಕರಣ. | • ಸಸ್ಯಜನ್ಯ, ಪ್ರಾಣಿಜನ್ಯ ಆಹಾರವೇ ಎಂದು ತಿಳಿಯುವ ಆಟವನ್ನು ಮಕ್ಕಳು ಆಡಲಿ.<br>• ಎಲ್ಲ ಮಕ್ಕಳು ಆಹಾರದ ಮೂಲಗಳನ್ನು ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಆಹಾರವಾಗಿ ವರ್ಗೀಕರಿಸಿ ಪಟ್ಟಿ ಮಾಡಲು ನೆರವಾಗೋಣ. |
| | ವಿವಿಧಆಹಾರಗಳನ್ನುತಯಾರಿಸುವಪರಿಕರಗಳನ್ನುಮತ್ತುಆಹಾರವಸ್ತುಗಳನ್ನುಪಟ್ಟಿಮಾಡುವರು. | ದಿನ 5<br>ನನ್ನ ಹೊಟ್ಟೆ ತುಂಬಲು ಏನೇನು ಬೇಕು?<br>ಪಟ್ಟಿತಯಾರಿಸಿ ಆಲ್ಬಂತಯಾರಿಕೆ | • ಪ್ರತಿ ದಿನ ಮನೆಯಲ್ಲಿ ಮತ್ತು ಸಮಾರಂಭಗಳಲ್ಲಿ ಆಹಾರ ತಯಾರಿಸಲು ಬಳಸುವ ಪಾತ್ರೆಗಳನ್ನು ಪಟ್ಟಿ ಮಾಡಲು ನೆರವಾಗೋಣ.<br>• ಮತ್ತು ಪಾತ್ರೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಲು ಸಹಕರಿಸೋಣ. |

| | | | |
|---|---|---|---|
| | ಇ. ವಿವಿಧಆಹಾರಗಳಲ್ಲಿರುವಪೋಷಕಾಂಶಗಳನ್ನುಪಟ್ಟಿ ಮಾಡುವರು. | ಆಹಾರ ಪದಾರ್ಥಗಳನ್ನು ವರ್ಗೀಕರಿಸೋಣ ಕೋಷ್ಟಕ ತಯಾರಿಸೋಣ | • ಆಹಾರ ತಯಾರಿಸಲು ಬಳಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಲು ಅವಕಾಶ ನೀಡಿ. ಅವುಗಳನ್ನು ಧಾನ್ಯ, ಬೇಳೆಕಾಳು, ಹಣ್ಣುಗಳು, ತರಕಾರಿ, ಸೊಪ್ಪು, ಎಣ್ಣೆಕಾಳು, ಪ್ರಾಣಿಜನ್ಯ ಆಹಾರವನ್ನಾಗಿ ವರ್ಗೀಕರಿಸಿ ಕೋಷ್ಟಕ ತಯಾರಿಸಲು ನೆರವಾಗೋಣ. |
| | ಈ. ತಮ್ಮಸುತ್ತಲಿನಆಹಾರಮತ್ತುಸಾಂಸ್ಕೃತಿಕವೈವಿಧ್ಯವನ್ನುತಿಳಿಯುವರು. | ದಿನ 6 ನೋಡಿ ನಲಿಯೋಣ ಗುಂಪು ಚಟುವಟಿಕೆ. | • ಮಕ್ಕಳನ್ನು 3ಗುಂಪುಗಳನ್ನಾಗಿ ಮಾಡಿ. ಮೊದಲು ಗುಂಪು ಅವರ ಮನೆಗಳಲ್ಲಿ, ಎರಡನೇ ಗುಂಪು ಊರಿನಲ್ಲಿ ಆಚರಿಸುವ ಹಬ್ಬದಂದು ಮತ್ತು ಮೂರನೇ ಗುಂಪು ಜಾತ್ರೆಗಳಲ್ಲಿ ಮಾಡುವ ಅಡುಗೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಿ ತರಗತಿಯಲ್ಲಿ ವಿವರಿಸಲು ಅವಕಾಶ ನೀಡೋಣ. |
| ನೀರಿನಪ್ರಾಮುಖ್ಯತೆಯನ್ನುಅರ್ಥಮಾಡಿಕೊಳ್ಳುವರು. | ನೀರಿನಮೂಲಗಳನ್ನುಪಟ್ಟಿಮಾಡುವರು. | ದಿನ 7 ಆಲ್ಬಂತಯಾರಿಕೆ | • ನೀರಿನ ವಿವಿಧ ಮೂಲಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಲು ನೆರವಾಗೋಣ. |
| | ನೀರಿನಉಪಯೋಗಗಳನ್ನುಪಟ್ಟಿಮಾಡಿ, ಅದರಮಹತ್ವವನ್ನುಗೆಳೆಯರೊಂದಿಗೆಚರ್ಚಿಸುವರು. | ದಿನ 8 ಮೂಕಾಭಿನಯ. ಗುಂಪುಚರ್ಚೆ. | • ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಪ್ರತಿ ಮಗುವು ವೃತ್ತದ ಮಧ್ಯದಲ್ಲಿ ಬಂದು ನೀರಿನ ಉಪಯೋಗವನ್ನು ಮೂಕಾಭಿನಯ ಮಾಡಿತೋರಿಸಲು |

| | | | |
|---|---|---|---|
| | | | ಸೂಚಿಸಿ. ಉಳಿದವರು ಆ ಮಗು ಮಾಡಿದ ಅಭಿನಯವನ್ನು ಗುರುತಿಸಿ ಹೇಳಲಿ.<br>• ನೀರು ಇಲ್ಲದಿದ್ದರೆ ಏನಾಗುತ್ತದೆ? ಇಂತಹ 4 ಪ್ರಶ್ನೆಗಳನ್ನು 4 ಗುಂಪಿಗೆ ನೀಡಿ, ಮಕ್ಕಳು ಅವರ ಸಹಪಾಠಿಗಳೊಂದಿಗೆ ಚರ್ಚಿಸಿ, ಮಂಡಿಸಲು ಅನುಕೂಲಿಸೋಣ. |
| | ನೀರುಹೇಗೆಮಲಿನವಾಗುತ್ತದೆಎಂಬುದನ್ನುತಿಳಿಯುವರು. | ದಿನ 9<br>ವಿಡಿಯೋಗಳ ಪ್ರದರ್ಶನ. | • ನೀರು ಮಲಿನವಾಗುವ ವಿವಿಧ ಸನ್ನಿವೇಶಗಳ ವಿಡಿಯೋಗಳನ್ನು ಪ್ರದರ್ಶಿಸೋಣ. ವೀಕ್ಷಿಸಿದ ನಂತರ ಮಕ್ಕಳು ನೀರಿನ ಮಾಲಿನ್ಯವನ್ನು ನಿಯಂತ್ರಿಸುವುದು ಹೇಗೆ ಎಂದು ವಿವರಿಸಲಿ.<br>https://www.youtube.com/watch?v=Om42Lppkd9w |
| | ಮಲಿನನೀರುಜೀವಸಂಕುಲದಮೇಲೆಬೀರುವಪರಿಣಾಮಗಳನ್ನುಅರಿತು,ತಾವೇನುಮಾಡಬೇಕೆಂದುಚರ್ಚಿಸುವರು. | ದಿನ 9<br>ಚರ್ಚೆ– ನೀರು ಮಲಿನವಾಗದಿರಲು ನಾನೇನು ಮಾಡಬೇಕು?<br>ಪಿಪಿಟಿ/ವಿಡಿಯೋ | • ವಿಡಿಯೋಗಳನ್ನು ವೀಕ್ಷಿಸಿದ ನಂತರ ಮಕ್ಕಳು ಮಲಿನ ನೀರು ಜೀವಿಗಳ ಮೇಲೆ ಬೀರುವ ಪರಿಣಾಮಗಳ ಪಟ್ಟಿಯನ್ನು ಪರಸ್ಪರ ಚರ್ಚಿಸಿ ತಯಾರಿಸಲಿ. ನಂತರ ನೀರಿನ ಸ್ವಚ್ಛತೆ ಕಾಪಾಡುವಲ್ಲಿ ನಮ್ಮ ಪಾತ್ರವೇನು? ಎಂದು ವಿವರಿಸಲು |

| | | | |
|---|---|---|---|
| | | ಪ್ರದರ್ಶನ | ಅವಕಾಶ ನೀಡೋಣ. https://www.youtube.com/watch?v=GGnk2bUH6ys |
| ಮಾನವದೇಹದಅಂಗಗಳಕಾರ್ಯಗಳನ್ನುಅರ್ಥ ಮಾಡಿಕೊಂಡುಉತ್ತಮಆರೋಗ್ಯವನ್ನುಹೊಂದುವರು. | ದೇಹದಭಾಗಗಳನ್ನುಗುರುತಿಸಿಅವುಗಳಕಾರ್ಯಗಳನ್ನು ತಿಳಿಯುವರು. | ದಿನ 10 ನನ್ನ ದೇಹ ಅದೆಷ್ಟು ಚೆನ್ನ. ಅಭಿನಯ ಗೀತೆ ಮಿಂಚು ಪಟ್ಟಿ ಜೋಡಣೆ | • ದೇಹದ ಭಾಗಗಳನ್ನು ಗುರುತಿಸುವ ಅಭಿನಯ ಗೀತೆ ಹಾಡಿಸೋಣ.<br>• ದೇಹದ ಭಾಗಗಳ ಚಿತ್ರಗಳಿಗೆ ಅವುಗಳ ಕಾರ್ಯವನ್ನು ವಿವರಿಸುವ ಮಿಂಚು ಪಟ್ಟಿಯನ್ನುಮಕ್ಕಳೇ ಜೋಡಿಸಲು ಅವಕಾಶ ನೀಡೋಣ. |
| | ದೇಹದಲ್ಲಿನಡೆಯುವಮುಖ್ಯಕ್ರಿಯೆಗಳುಮತ್ತುಅವುಗಳಿಗೆಸಂಬಂಧಪಟ್ಟಅಂಗಗಳಪರಿಚಯಮಾಡಿಕೊಳ್ಳುವರು. | ದಿನ 11 ವಿಡಿಯೋ ಪ್ರದರ್ಶನ. ಅಭ್ಯಾಸದ ಹಾಳೆಗಳನ್ನು ತುಂಬುವುದು. | • ವಿಡಿಯೋ ಬಳಸಿ ದೇಹದ ಹೊರ ಮತ್ತು ಒಳ ಅಂಗಗಳ ಕಾರ್ಯವನ್ನು ಪರಿಚಯಿಸೋಣ.  ಅಭ್ಯಾಸದ ಹಾಳೆಗಳನ್ನು ನೀಡಿ ಅವುಗಳಲ್ಲಿನ ಚಟುವಟಿಕೆಯನ್ನು ನಿರ್ವಹಿಸಲು ಪ್ರೋತ್ಸಾಹಿಸೋಣ.<br>• https://www.youtube.com/watch?v=8Nb9E62p2c0 |
| | ಸ್ವಚ್ಛತೆಯಅಭ್ಯಾಸದಿಂದಉತ್ತಮಆರೋಗ್ಯವನ್ನುಪಡೆಯಬಹುದೆಂದುತೀರ್ಮಾನಿಸಿ, ಅವುಗಳನ್ನುರೂಢಿಸಿಕೊಳ್ಳುವಮನೋಬಾವವನ್ನು ಹೊಂದುವರು. | ದಿನ 12. ಸಂದರ್ಶನ– ಉತ್ತಮ ಆರೋಗ್ಯ | • ಸ್ಥಳೀಯ ವೈದ್ಯಾಧಿಕಾರಿಗಳು/ ಆರೋಗ್ಯ ಕಾರ್ಯಕರ್ತರನ್ನು ಸಂದರ್ಶಿಸಿ ದೇಹದ ಸುರಕ್ಷತೆ ಮತ್ತು ರೋಗಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ನೆರವಾಗಿ. |

| | | | |
|---|---|---|---|
| | | ಪಡೆಯಲು ನಾನೇನು ಮಾಡಬೇಕು. ಗುಂಪುಚರ್ಚೆ. | • ನಮ್ಮ ಆರೋಗ್ಯವನ್ನು ರಕ್ಷಿಸಿಕೊಳ್ಳಲು ನಾವು ಏನು ಮಾಡಬೇಕು ಎಂದು ಗುಂಪು ಚರ್ಚೆಯನ್ನು ಸುಗಮಿಸಿ. ಈ ಚರ್ಚೆಯ ನಂತರ ಅವರ ದಿನನಿತ್ಯದ ಚಟುವಟಿಕೆಗಳಲ್ಲಿ ಮಕ್ಕಳು ಮಾಡಿಕೊಳ್ಳಲು ಬಯಸುವ ಬದಲಾವಣೆಗಳನ್ನು ಬರೆದು ತರಗತಿಗೆ ವಿವರಿಸಲು ಅನುಕೂಲ ಕಲ್ಪಿಸೋಣ. |
| ಸಾರಿಗೆಮತ್ತುಸಂಪರ್ಕಸಾಧನಗಳಪ್ರಾಮುಖ್ಯತೆಯನ್ನುಅರಿತುವಿವೇಚನೆಯಿಂದಬಳಸುವರು. | ಕಾಲಕಾಲಕ್ಕೆಸಾರಿಗೆಮತ್ತುಸಂಪರ್ಕದಲ್ಲಿಆದಬದಲಾವಣೆಗಳನ್ನುತಿಳಿಯುವರು. | ದಿನ 13 ಹಿರಿಯರೊಂದಿಗೆ ಭೇಟಿ ನಕ್ಷೆ ತಯಾರಿಕೆ. ವಾಹನಗಳ ಚಿತ್ರ ಅಂಟಿಸು. ವಾಹನಗಳ ಚಿತ್ರ ಬರೆದು ಬಣ್ಣ ಹಾಕು. | • ಹಿರಿಯರನ್ನು ಭೇಟಿ ಮಾಡಿ ಅವರ ಕಾಲದಲ್ಲಿ ಪ್ರಯಾಣಕ್ಕೆ ಬಳಸುತ್ತಿದ್ದ ವಾಹನಗಳ ವಿವರಗಳನ್ನು ಸಂಗ್ರಹಿಸಿ ತರಗತಿಯಲ್ಲಿ ವಿವರಿಸಲು ಎಲ್ಲ ಮಕ್ಕಳಿಗೆ ಅವಕಾಶ ಕಲ್ಪಿಸೋಣ. ನಂತರ ಈಗ ಹತ್ತಿರ ಮತ್ತು ದೂರದ ಪ್ರಯಾಣಕ್ಕೆ ಬಳಸುವ ವಾಹನಗಳು ಕಾಲದಿಂದ ಕಾಲಕ್ಕೆ ಹೇಗೆ ಬದಲಾದವು ಎನ್ನುವ ನಕ್ಷೆಯನ್ನು ತಯಾರಿಸಲು ನೆರವಾಗೋಣ. |
| | ವಿವಿಧವಾಹನಗಳನ್ನುಸಾರಿಗೆಯವಿಧಗಳಿಗನುಸಾರವರ್ಗೀಕರಿಸುವರು. | ದಿನ 14. ವಾಹನಗಳ ವೀಕ್ಷಣೆ ಮತ್ತು ವರ್ಗೀಕರಣ | • ಮಕ್ಕಳನ್ನು ತರಗತಿಯ ಹೊರಗಡೆ ಕರೆದುಕೊಂಡು ಹೋಗಿ ವಿವಿಧ ರೀತಿಯ ವಾಹನಗಳನ್ನು ವೀಕ್ಷಿಸಿ ಅವುಗಳ ಲಕ್ಷಣಗಳನ್ನು ಚರ್ಚಿಸಿ, ಅವುಗಳನ್ನು |

| | | | |
|---|---|---|---|
| | | ಚಿತ್ರಗಳ ಆಲ್ಬಂ ತಯಾರಿಕೆ.<br>ನಾನು ಮತ್ತು ನನ್ನ ವಾಹನ. | ಭೂ, ಆಕಾಶ ಮತ್ತು ಜಲದಲ್ಲಿ ಸಂಚರಿಸುವ ಆಧಾರದಲ್ಲಿ ಅವುಗಳನ್ನು ವಿಂಗಡಿಸಲು ನೆರವಾಗಿ.<br>• ವಾಹನಗಳ ಚಿತ್ರಗಳನ್ನು ಸಂಗ್ರಹಿಸಿ ಅವುಗಳನ್ನು ಭೂ, ಆಕಾಶ ಮತ್ತು ಜಲದಲ್ಲಿ ಸಂಚರಿಸುವ ಆಧಾರದಲ್ಲಿ ವರ್ಗೀಕರಿಸಿ ಆಲ್ಬಂ ತಯಾರಿಸಲು ಪ್ರೋತ್ಸಾಹಿಸೋಣ. |
| | ಸಾರಿಗೆಗಾಗಿಬಳಸುವಪ್ರಾಣಿಗಳಬಗ್ಗೆಸಂವೇದನಾಶೀಲ ವಾಗಿವರ್ತಿಸುವಮನೋಭಾವಬೆಳೆಸಿಕೊಳ್ಳುವರು. | ದಿನ 15.<br>ವೀಕ್ಷಣೆ– ಪ್ರಾಣಿಗಳಿಗೂ ನೋವಾಗುತ್ತದೆ ಅಲ್ವಾ?<br>ಚರ್ಚೆ ಮತ್ತು ಕಲ್ಪನೆ. | • ಪ್ರತ್ಯಕ್ಷವಾಗಿ ಅಥವಾ ವಿಡಿಯೋಗಳಲ್ಲಿ ಸಾರಿಗೆಗಾಗಿ ಪ್ರಾಣಿಗಳನ್ನು ಬಳಸುವ ಸನ್ನಿವೇಶಗಳನ್ನು ವೀಕ್ಷಿಸಲಿ.<br>https://www.youtube.com/watch?v=CKJDt2k2qI0<br>• ಅವುಗಳಿಗೆ ನಾವು ನೀಡುವ ತೊಂದರೆಗಳನ್ನು ಪಟ್ಟಿ ಮಾಡಲು ತಿಳಿಸೋಣ. ಅವುಗಳಿಗೆ ನೀಡುವ ತೊಂದರೆಗಳನ್ನು ನಮ್ಮ ಕೆಲಸಗಳಿಗೆ ತೊಂದರೆಯಾಗದಂತೆ ಹೇಗೆ ನಿರ್ವಹಿಸಬಹುದು ಎಂಬುದನ್ನು ಗುಂಪುಗಳಲ್ಲಿ ಚರ್ಚಿಸಲು ಅನುಕೂಲಿಸುವ. ನಾವೇ ಪ್ರಾಣಿಗಳನ್ನು ಬಳಸುತ್ತಿದ್ದರೆ ಪ್ರಾಣಿಗಳ ಜತೆ ಹೇಗೆ |

| | | | |
|---|---|---|---|
| | | | ವರ್ತಿಸುತ್ತಿದ್ದೆ ಎನ್ನುವುದನ್ನು ಹೇಳಲು ಎಲ್ಲಾ ಮಕ್ಕಳಿಗೆ ಅವಕಾಶ ನೀಡೋಣ. |
| | ಡಿಜಿಟಲ್ ಸಂಪರ್ಕಸಾಧನಗಳನ್ನುಅಗತ್ಯವಿದ್ದಾಗಮಾತ್ರಮಿತವಾಗಿಮತ್ತುಸುರಕ್ಷಿತವಾಗಿಬಳಸಬೇಕೆಂದುತಿಳಿಯುವರು. | ದಿನ 15.<br>ಕೋಷ್ಟಕ ತಯಾರಿಕೆ<br>ವಿಡಿಯೋ ವೀಕ್ಷಣೆ.<br>ನಾನೂ ಮೊಬೈಲ್ ಬಳಸಬಹುದಾ! ಚರ್ಚೆ. | • ಮನೆಗಳಲ್ಲಿ ಬಳಸುವ ವಿವಿಧ ಡಿಜಿಟಲ್ ಸಂಪರ್ಕ ಸಾಧನಗಳನ್ನು ಮತ್ತು ಅವುಗಳ ಉಪಯೋಗಗಳನ್ನು ಕೋಷ್ಟಕದಲ್ಲಿ ಬರ್ತಿಮಾಡಲು ಅನುಕೂಲಿಸೋಣ.<br>• ಡಿಟಿಟಲ್ ಮಾಧ್ಯಮಗಳ ಉಪಯೋಗ ಮತ್ತು ಅವುಗಳಿಂದಾಗುವ ತೊಂದರೆಗಳನ್ನು ಉಪನ್ಯಾಸ ಅಥವಾ ವಿಡಿಯೋಗಳಿಂದ ಮನವರಿಕೆ ಮಾಡೋಣ.<br>• https://www.youtube.com/watch?v=ndOB-vXwXxM<br>• ಅವುಗಳನ್ನು ಸುರಕ್ಷಿತವಾಗಿ ಹೇಗೆ ಬಳಸಬೇಕು ಎಂದು ಮಾರ್ಗದರ್ಶಿಸೋಣ. |
| ಸಂಚಾರಿ ನಿಯಮಗಳನ್ನು ಪಾಲಿಸಿದರೆ ಮತ್ತು ಎಚ್ಚರಿಕೆಯಿಂದ ಇದ್ದರೆ ಅಪಘಾತಗಳನ್ನು ಕಡಿಮೆ ಮಾಡಬಹುದು ಎಂಬ ತೀರ್ಮಾನಕ್ಕೆ ಬರುವರು. | ಅಪಘಾತಗಳಿಗೆ ಕಾರಣವನ್ನು ಪಟ್ಟಿ ಮಾಡುವರು. | ದಿನ 16<br>ಸಂಚಾರಿ ಮತ್ತು ಬಿಸಿವಸ್ತುಗಳಿಂದ ಆಗುವ ಅಪಘಾತಗಳು ಇತ್ಯಾದಿ | • ತಮ್ಮ ಅನುಭವಗಳ ಆಧಾರದಲ್ಲಿ ಮಕ್ಕಳು ವೈಯಕ್ತಿಕವಾಗಿ ಮತ್ತು ಗುಂಪಿನಲ್ಲಿ ಅಪಘಾತಗಳ ಪಟ್ಟಿಯನ್ನು ತಯಾರಿಸಿ, ತರಗತಿಯಲ್ಲಿ ಪ್ರದರ್ಶಿಸಲು ಅನುವು ಮಾಡಿಕೊಡಿ. ಅವುಗಳನ್ನು ಎಲ್ಲಾ ಮಕ್ಕಳು ಓದಲಿ. |

| | | | |
|---|---|---|---|
| | | ಅಪಘಾತಗಳ ಪಟ್ಟಿತಯಾರಿಕೆ. | |
| | ಸಂಚಾರಿ ಸಂಕೇತಗಳನ್ನು ಓದಲು ಕಲಿಯುವರು. | ದಿನ 17<br>ಮಿಂಚುಪಟ್ಟಿ ಯೊಂದಿಗೆ ಆಟ ಚಿತ್ರ ಬರೆಯುವುದು. ಸಂಕೇತಗಳನ್ನು ಓದೋಣ. | • ಮೊದಲು ರಸ್ತೆ ಸಂಕೇತಗಳನ್ನು ಪ್ರದರ್ಶಿಸಿ ಅವುಗಳನ್ನು ವಿವರಿಸುತ್ತಾ ಅವುಗಳನ್ನು ಕಲಿಸೋಣ.<br>• ಸಂಕೇತಗಳ ಮತ್ತು ಅದರ ವಿವರಣೆಯ ಮಿಂಚು ಪಟ್ಟಿಗಳನ್ನು ಹೊಂದಿಸುವ ಆಟ ಆಡಿಸೋಣ.<br>• ಶಾಲೆಯಿಂದ ಮನೆಗೆ ಹೋಗುವಾಗ ಅಥವಾ ಬರುವಾಗ ತಾವು ಗಮನಿಸಿದ ಸಂಕೇತಗಳ ಚಿತ್ರ ಮತ್ತು ಅದರ ವಿವರಣೆಯನ್ನು ಬರೆದು ತರಲು ಪ್ರೋತ್ಸಾಹಿಸೋಣ.<br>• https://www.youtube.com/watch?v=OQQToxyMi1w |
| | ರಸ್ತೆ ಸುರಕ್ಷತಾ ನಿಯಮಗಳನ್ನು ತಿಳಿದು ಪಾಲಿಸುವರು. | ದಿನ 18<br>ಮಾಹಿತಿ ಸಂಗ್ರಹ | • ಸಂಚಾರಿ ಕಾನ್ಸ್‌ಟೇಬಲ್ ಒಬ್ಬರನ್ನು ಶಾಲೆಗೆ ಆಹ್ವಾನಿಸಿ ಅವರಿಂದ ಮಕ್ಕಳು ಪ್ರಶ್ನೋತ್ತರದ ಮೂಲಕ ಮಾಹಿತಿ ಸಂಗ್ರಹಿಸಲು ಅನುವು ಮಾಡಿಕೊಡಿ.<br>• ಮಾಹಿತಿ ಸಂಗ್ರಹಣೆಯ ಚಾರ್ಟ್‌ಅನ್ನು ಪ್ರದರ್ಶಿಸಿ ಮಕ್ಕಳಿಂದ ಓದಿಸಿ.<br>• ರಸ್ತೆ ನಿಯಮವನ್ನು ಏಕೆ |

| | | | |
|---|---|---|---|
| | | | ಪಾಲಿಸಬೇಕೆಂದು ಮಕ್ಕಳೊಂದಿಗೆ ಚರ್ಚಿಸುತ್ತಾ ಅವರ ಮನೋಭಾವವನ್ನು ಬದಲಿಸಿಕೊಳ್ಳಲು ಸುಗಮಿಸಿ. |
| | ಸಾಮಾನ್ಯವಾಗಿ ಮನೆಯಲ್ಲಿ ಹಾಗೂ ಹೊರಗಡೆ ಆಗುವ ಅಪಘಾತಗಳನ್ನು ಎಚ್ಚರಿಕೆಯಿಂದ ತಡೆಯಬಹುದು ಎಂದು ನಿರ್ಧರಿಸುವರು. | ದಿನ 18 ಅಫಘಾತದಿಂದ ಸುರಕ್ಷಿತವಾಗಿರುವುದು ಹೇಗೆ? | • ನಿತ್ಯ ಜೀವನದಲ್ಲಿ ಆಗುವ ಇತರೆ ಅಪಘಾತ/ಸನ್ನಿವೇಶ ಮತ್ತು ನಾವು ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನು ಪಟ್ಟಿ ಮಾಡಲು<br>• ಮನೆಗೆಲಸವನ್ನು ನೀಡೋಣ.<br> |
| ನಮ್ಮ ರಾಜ್ಯದ ಜನರ ವಿಭಿನ್ನ ಆಹಾರ ಪದ್ಧತಿ ಮತ್ತು ವೈವಿಧ್ಯತೆಯನ್ನು ಮೆಚ್ಚುವರು. | ಸ್ಥಳೀಯ ಸಂಸ್ಕೃತಿಯನ್ನು ಬಿಂಬಿಸು ಹಬ್ಬ ಜಾತ್ರೆ ಇತ್ಯಾದಿಗಳನ್ನು ಪಟ್ಟಿ ಮಾಡುವರು. | ದಿನ 19 ಜಾತ್ರೆಯಲ್ಲಿ ಒಂದು ದಿನ. ಹಬ್ಬದ ಮೋಜು. ಗುಂಪಿನಲ್ಲಿ ಮಾಹಿತಿ ಸಂಗ್ರಹ. | • ಮಕ್ಕಳನ್ನು 4 ಗುಂಪುಗಳನ್ನಾಗಿ ಮಾಡಿ. ಮೊದಲು ಗುಂಪು ಅವರ ಮನೆಗಳಲ್ಲಿ, ಎರಡನೇ ಗುಂಪು ಊರಿನಲ್ಲಿ ಆಚರಿಸುವ ಹಬ್ಬದಂದು ಮತ್ತು ಮೂರನೇ ಗುಂಪು ಜಾತ್ರೆಗಳಲ್ಲಿ ಮಾಡುವ ಅಡುಗೆ, ಉಡುಪು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಿ ತರಗತಿಯಲ್ಲಿ ವಿವರಿಸಲು ಅವಕಾಶ ನೀಡೋಣ. |
| | ತಾವು ಭಾಗವಹಿಸಿದ ಹಬ್ಬ ಜಾತ್ರೆಗಳ | ದಿನ 19 | • ಮಕ್ಕಳು ಭಾಗವಹಿಸಿದ ಜಾತ್ರೆ, ಹಬ್ಬ, |

| | | | |
|---|---|---|---|
| | ಅನುಭವಗಳನ್ನು ಹಂಚಿಕೊಳ್ಳುವರು. | ಅನುಭವ ವಿನಿಮಯ | ಸರ್ಕಸ್ ಇತರೆ ಸಂಭ್ರಮಗಳ ಅನುಭವಗಳನ್ನು ತಮ್ಮ ಗೆಳೆಯರೊಡನೆ ಹಂಚಿಕೊಳ್ಳಲು ಎಲ್ಲ ಮಕ್ಕಳಿಗೂ ಅವಕಾಶನೀಡಿ. |
| | ನಮ್ಮ ರಾಜ್ಯದ ವಿವಿಧ ಭಾಗಗಳಲ್ಲಿನ ಜನರ ಆಹಾರ, ಉಡುಪು ವೈವಿಧ್ಯತೆಯನ್ನು ತಿಳಿದುಕೊಳ್ಳುವರು. | ದಿನ20 ವಿಡಿಯೋ ಪ್ರದರ್ಶನ ಸಂವಾದ ವೇಷ ಭೂಷಣ ಪ್ರದರ್ಶನ. | • ವಿಡಿಯೋಗಳ, ಚಿತ್ರಪಟಗಳ ಮೂಲಕ ರಾಜ್ಯದ ವಿವಿಧ ಭಾಗಗಳಲ್ಲಿನ ಆಹಾರ, ಉಡುಪು, ಸಂಪ್ರದಾಯಗಳ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡೋಣ. ತಮ್ಮ ಊರಿನ ವೈವಿಧ್ಯತೆಗೆ ಹೋಲಿಕೆ ಮಾಡಿಕೊಳ್ಳಲು ಮಕ್ಕಳೊಂದಿಗೆ ಸಂವಾದ ಮಾಡಿಸೋಣ.<br>• ಮಕ್ಕಳು ಬೇರೆ ಪ್ರದೇಶದ ಉಡುಪುಗಳನ್ನು ಧರಿಸಿ ವೇಷ ಭೂಷಣ ಪ್ರದರ್ಶನ ಮಾಡಿಸಬಹುದು.<br>• https://www.youtube.com/watch?v=yzQQgzbvy9U<br>• https://www.youtube.com/watch?v=2Xo9plwbVBk<br>• https://www.youtube.com/watch?v=hIn6GUNzMkw |
| ನಮ್ಮ ರಾಜ್ಯದ ವೈವಿಧ್ಯತೆಯನ್ನು ತಿಳಿದು ಹೆಮ್ಮೆ ಪಡುವರು. | ಭಾರತದ ನಕ್ಷೆಯಲ್ಲಿ ಕರ್ನಾಟಕವನ್ನು ಮತ್ತದರ ನೆರೆಹೊರೆ ರಾಜ್ಯಗಳನ್ನು ಗುರುತಿಸುವರು. | ದಿನ 21. ನಕ್ಷೆಯಲ್ಲಿ | • ಚಿಕ್ಕ ಚಿಕ್ಕ ಮಕ್ಕಳ ಗುಂಪುಗಳಿಗೆ ಭಾರತದ ನಕ್ಷೆಯನ್ನು ನೀಡಿ ಅದರಲ್ಲಿ |

| | | | |
|---|---|---|---|
| | | ಕರ್ನಾಟಕ ಮತ್ತು ನೆರೆಹೊರೆ ರಾಜ್ಯಗಳನ್ನು ಗುರುತಿಸುವ ಚಟುವಟಿಕೆ | ರಾಜ್ಯ ಮತ್ತು ದಿಕ್ಕುಗಳಿಗನುಗುಣವಾಗಿ ನೆರೆಹೊರೆ ರಾಜ್ಯಗಳನ್ನು ಗುರುತಿಸಲು ನೆರವು ನೀಡೋಣ.<br>• ರಾಜ್ಯದ ನಕ್ಷೆಯನ್ನು ಬರೆದು ಬಣ್ಣ ತುಂಬಲು ಹೇಳಿ, ಪರಿಸರ ಸಾಮ್ಯತೆಯಿರುವ ಜಿಲ್ಲೆಗಳನ್ನು ಒಂದೆ ರೀತಿಯ ಬಣ್ಣದಿಂದ ಗುರುತಿಸಲು ಸೂಚಿಸೋಣ.<br>• Out line map ನೀಡಿ ಬಣ್ಣ ತುಂಬಲು ಸಹಾಯ ಮಾಡೋಣ. |
| | ಕರ್ನಾಟಕದ ಸ್ವಾಭಾವಿಕ ವಿಭಾಗಗಳ ಪರಿಚಯ ಮಾಡಿಕೊಳ್ಳುವರು. | ದಿನ 22<br>ನೋಡೋಣ ಬಾ ನಮ್ಮ ರಾಜ್ಯ ವಿಡಿಯೋ ಪ್ರದರ್ಶನ | • ಕರ್ನಾಟಕ ರಾಜ್ಯದ ಸ್ವಾಭಾವಿಕ ವಿಭಾಗಗಳ ಲಕ್ಷಣಗಳ ವಿಡಿಯೋವನ್ನು ತೋರಿಸಿ. ಅವುಗಳ ಲಕ್ಷಣಗಳನ್ನು ಪಟ್ಟಿ ಮಾಡಲು ಅನುಕೂಲಿಸಿ.<br>• https://www.youtube.com/watch?v=Q_jLndZxyzw<br>• 4 ನೇ ತರಗತಿ ಪಠ್ಯಪುಸ್ತಕದ ಪುಟ ಸಂಖ್ಯೆ 225 ರಿಂದ 228 ಚಟುವಟಿಕೆ ಮಾಡಿಸೋಣ. |
| | ನಮ್ಮ ರಾಜ್ಯದ ಪ್ರಸಿದ್ಧ ಐತಿಹಾಸಿಕ ಸ್ಥಳಗಳ ಮತ್ತು ನಿಸರ್ಗಧಾಮಗಳ ಪರಿಚಯವನ್ನು ಮಾಡಿಕೊಂಡು ಅವುಗಳನ್ನು ಸಂರಕ್ಷಿಸುವ ಮನೋಭಾವವನ್ನು | ದಿನ 23<br>ಆಲ್ಬಂ ತಯಾರಿಕೆ ವಿಡಿಯೋ | • ಐತಿಹಾಸಿಕ ಸ್ಥಳ, ನಿಸರ್ಗಧಾಮದ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ ಅವುಗಳ ವಿವರ ಬರೆಯಲು |

| | | | |
|---|---|---|---|
| | ಬೆಳೆಸಿಕೊಳ್ಳುವರು. | ಪ್ರದರ್ಶನ<br>ಚರ್ಚೆ.<br>ನಿಸರ್ಗಧಾಮಗಳ<br>ಪರಿಚಯ | ಸೂಕ್ತ ಮಾರ್ಗದರ್ಶನ ನೀಡೋಣ.<br>• ಐತಿಹಾಸಿಕ ಸ್ಥಳ, ನಿಸರ್ಗಧಾಮಗಳ ವಿಡಿಯೋ ತೋರಿಸಿ ಅವುಗಳ ಸೌಂದರ್ಯವನ್ನು ಆಸ್ವಾದಿಸಲು ಪ್ರೇರೇಪಿಸಿ. ಅವುಗಳನ್ನು ರಕ್ಷಿಸಬೇಕೇ ಎನ್ನುವ ಚರ್ಚೆಯನ್ನು ಮುಂದುವರೆಸಿ ರಕ್ಷಿಸುವ ಮನೋಭಾವವನ್ನು ಬೆಳೆಸಿಕೊಳ್ಳುವ ವಾತಾವರಣವನ್ನು ಸೃಜಿಸಿ.<br>• https://www.youtube.com/watch?v=17511RQZON4<br>• https://www.youtube.com/watch?v=ZwJ-IdLan5Y |
| ಕಸವನ್ನು ನಿರ್ವಹಿಸುವ ಮತ್ತು ಕಸವನ್ನು ಪುನರ್ಬಳಸುವ ಕೌಶಲವನ್ನು ತಮ್ಮದಾಗಿಸಿಕೊಳ್ಳುವರು. | ತ್ಯಾಜ್ಯಗಳನ್ನು ವರ್ಗೀಕರಿಸುವರು.<br> | ದಿನ 24<br>ತ್ಯಾಜ್ಯದ<br>ವರ್ಗೀಕರಣದ ಆಟ<br> | • ಮಕ್ಕಳು ಬರುವಾಗ ತಮಗೆ ಸಿಗುವ ಕಸಗಳನ್ನು ಸಂಗ್ರಹಿಸಲು ಹೇಳೋಣ.<br>• ಸಂಗ್ರಹಿಸಿ ತಂದ ಕಸವನ್ನು ಅವರದೇ ಆದ ಕ್ರಮದಲ್ಲಿ ವರ್ಗೀಕರಿಸಲು ಮತ್ತು ವರ್ಗೀಕರಣಕ್ಕೆ ಆಧಾರಗಳನ್ನು ನೀಡಲು ಅವಕಾಶ ಕಲ್ಪಿಸೋಣ. ಸರಿ ಇದ್ದಲ್ಲಿ ಅವರನ್ನು ಪ್ರಶಂಶಿಸಿ. ಇಲ್ಲದಿದ್ದಲ್ಲಿ ಹೇಗೆ ವರ್ಗೀಕರಣ ಮಾಡಬಹುದೆಂದು ಅರಿವು ನೀಡಿ ಮತ್ತೆ ವರ್ಗೀಕರಿಸಲು |

| | | | |
|---|---|---|---|
| | | | ಸಹಕರಿಸೋಣ.<br>• ರೊಟ್ಟಿನ 4 ಪೆಟ್ಟಿಗೆಗಳಿಗೆ ಲೇಬಲ್ ಹಾಕಿ, ಕಸವನ್ನು ಅಥವಾ ಕಸದ ಮಿಂಚು ಪಟ್ಟಿಗಳನ್ನು ಸೂಕ್ತ ಪೆಟ್ಟಿಗೆಗೆ ಹಾಕಲು ಹೇಳಿ. ಆಟವನ್ನು ಪುನರಾವರ್ತಿಸೋಣ. |
| | ತ್ಯಾಜ್ಯದ ಸರಿಯಾದ ವಿಲೇವಾರಿ ಕ್ರಮಗಳನ್ನು ತಿಳಿಯುವರು. | ದಿನ 25 ಮತ್ತು 26<br>ಕಸ ಮನಸಿಗಷ್ಟೇ ಅಲ್ಲ ಕಿರಿಕಿರಿ ಮನಸ್ಸಿಗೂ ಹಾನಿಕಾರಿ – ವಿಡಿಯೋ ಪ್ರದರ್ಶನ, ಕ್ಷೇತ್ರ ಭೇಟಿ. ಸಂವಾದ | • ತಮ್ಮ ಮನೆಯ ಕಸವನ್ನು 3 ದಿನ ಸಂಗ್ರಹಿಸಿ, ಯಾವ ಕಸ ಏನಾಗುತ್ತದೆ ಗಮನಿಸಲಿ. ಅವರು ಗಮನಿಸಿದ ಅಂಶಗಳನ್ನು ತರಗತಿಯಲ್ಲಿ ವಿವರಿಸಲಿ.<br>• ಕಸವನ್ನು ಸರಿಯಾದ ನಿರ್ವಹಣೆ ಮಾಡದಿದ್ದರೆ ಪರಿಸರದ ಮೇಲೆ ಬೀರುವ ಪರಿಣಾಮವನ್ನು ವಿಡಿಯೋ ಮೂಲಕ ಮನನ ಮಾಡಿಕೊಳ್ಳಲು ನೆರವಾಗೋಣ.<br>• https://www.youtube.com/watch?v=-nNeNBkWDhY<br>• ತ್ಯಾಜ್ಯ ಸಂಗ್ರಹಕಾರರನ್ನು ಭೇಟಿ ಮಾಡಿ ಕಸವನ್ನು ವಿಲೇವಾರಿ ಮಾಡುವ ಕುರಿತು ಸಂವಾದ ಮಾಡಲು ನೆರವು ನೀಡೋಣ. |

<table>
<tr><td></td><td></td><td></td><td>
<table>
<tr><th></th><th>ತ್ಯಾಜ್ಯದ ವಸ್ತು</th><th>ತ್ಯಾಜ್ಯದ ಸ್ಥಳ</th><th>ತ್ಯಾಜ್ಯವು ಕಸದ ತೊಟ್ಟಿ ಯಲ್ಲಿತ್ತೇ?</th><th>ಇಲ್ಲವಾದ ಆಗ ತ್ಯಾ ಎಲ್ಲಿತ್ತು</th></tr>
<tr><td>Eg 1</td><td>ಕೈಒರೆಸುವ ಕಾಗದ</td><td>ತರಗತಿ</td><td>ಇಲ್ಲ</td><td>ಡೆಸ್ಕ್‌ನ ಕೆಳಗೆ</td></tr>
<tr><td>Eg 2</td><td>ಬಾಟಲಿನ ಬಿರಟೆ</td><td>ಅಡುಗೆಮನೆ</td><td>ಹೌದು</td><td>ಹೌದು</td></tr>
<tr><td>Eg 3</td><td>ಒಡೆದ ಪ್ರನಾಳ (ಟೆಸ್ಟ್‌ಟ್ಯೂಬ್)</td><td>ಪ್ರಯೋಗ ಶಾಲೆ</td><td>ಹೌದು</td><td>ಹೌದು</td></tr>
<tr><td>1</td><td></td><td></td><td></td><td></td></tr>
<tr><td>2</td><td></td><td></td><td></td><td></td></tr>
<tr><td>3</td><td></td><td></td><td></td><td></td></tr>
<tr><td>4</td><td></td><td></td><td></td><td></td></tr>
<tr><td>5</td><td></td><td></td><td></td><td></td></tr>
<tr><td>6</td><td></td><td></td><td></td><td></td></tr>
</table>
<br>• ಈ ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸೋಣ.</td></tr>
<tr><td></td><td>ತ್ಯಾಜ್ಯವನ್ನು ಮರು ಬಳುಸುವ ಕ್ರಮಗಳ ಬಗ್ಗೆ ಯೋಜಿಸುವರು.</td><td>ದಿನ 27<br>ಕಸದಿಂದ ಮಾಡೋಣ ರಸ.<br>ಗುಂಪು ಚಟುವಟಿಕೆ</td><td>• 5 R ಗಳ ಕುರಿತು ಮಾಹಿತಿ ನೀಡೋಣ. ಕಸವನ್ನು ಪುನರ್ ಬಳಕೆ ಮಾಡುವ ಅಗತ್ಯತೆಯನ್ನು ಮನವರಿಕೆ ಮಾಡಿಕೊಡೋಣ.<br>• ಕಸದಿಂದ ರಸ ಮಾಡುವ ಚಟುವಟಿಕೆಗಳನ್ನು ಮಾಡಿಸೋಣ.</td></tr>
<tr><td>ವಿವಿಧ ಕುಶಲ ಕರ್ಮಿಗಳು ತಯಾರಿಸುವ ಆಟಿಕೆ ಮತ್ತು ವಸ್ತುಗಳನ್ನು ಹೆಸರಿಸುವರು.</td><td>ಸ್ಥಳೀಯ ಹಾಗೂ ವಿವಿಧ ಪ್ರದೇಶಗಳಲ್ಲಿ ನಕಸುಬುಗಳನ್ನು ಗುರುತಿಸುವರು.</td><td>ದಿನ 28<br>ಸ್ಥಳ ಬೇಟಿ.<br>ಹೊಂದಿಸುವ ಚಟುವಟಿಕೆ.</td><td>• ಮಕ್ಕಳು ತಮ್ಮ ಊರಿನಲ್ಲಿರುವ ವಿವಿಧ ಕಸುಬುಗಳನ್ನು ಮಾಡುವ ವ್ಯಕ್ತಿಗಳನ್ನು ಸಂದರ್ಶಿಸಿ ಅವರು ಬಳಸುವ ಕಚ್ಚಾವಸ್ತುಗಳು ಮತ್ತು ಅವರು ತಯಾರಿಸುವ ವಸ್ತುಗಳ ವಿವರಗಳನ್ನು ಸಂದರ್ಶಿಸಿ. ಅವರ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಳ್ಳಲಿ. ಅವರ ಅನುಭವಗಳನ್ನು ಸಾರಾಂಶಿಸೋಣ.</td></tr>
</table>

| | | | |
|---|---|---|---|
| | | | • ವಿವಿಧ ಕಸುಬುಗಳ ಚಿತ್ರಗಳನ್ನು ಮತ್ತು ಅವರು ತಯಾರಿಸುವ ವಸ್ತುಗಳ ಚಿತ್ರಗಳನ್ನು ಹೊಂದಿಸು ವಚಟುವಟಿಕೆಯನ್ನು ಮಾಡಿಸೋಣ. |
| | ಬಾಲ ಕಾರ್ಮಿಕರು ಎದುರಿಸುವ ತೊಂದರೆಗಳನ್ನು ಅರಿತು ಅವರ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುತ್ತಾ ನಾವು ಬಾಲಕಾರ್ಮಿಕರಾಗಬಾರದೆಂದು ತೀರ್ಮಾನಿಸುವರು | ದಿನ 29<br>ನನ್ನ ಬಾಲ್ಯ ನನ್ನ ಹಕ್ಕು - ಗುಂಪು ಚರ್ಚೆ. | • ಮಕ್ಕಳು ಕೆಲಸಕ್ಕೆ ಹೋಗುವುದರಿಂದ ಅವರಿಗೆ ಆಗುವ ತೊಂದರೆಗಳನ್ನು ಕುರಿತು ಮಕ್ಕಳು ತಮ್ಮ ತಮ್ಮಲ್ಲಿ ಚರ್ಚೆಯನ್ನು ಮಾಡುತ್ತಾ ನಿರ್ಧಾರಕ್ಕೆ ಬರಲು ನೆರವಾಗೋಣ. ಚರ್ಚೆಯನ್ನು ಮುಗಿಸುವಾಗ ಮಕ್ಕಳು ತಮ್ಮ ಬಾಲ್ಯವನ್ನು ಹೇಗೆ ಕಳೆದುಕೊಳ್ಳುತ್ತಾರೆ. ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಅವರಿಗೆ ಮಾಹಿತಿ ನೀಡೋಣ. |
| | | ದಿನ 30<br>ಸಾಫಲ್ಯ ಪ್ರತಿಕ್ರಿಯೆ | • ಮಕ್ಕಳ ಸಾಫಲ್ಯ ಪ್ರತಿಕ್ರಿಯೆಯನ್ನು ನಿರ್ವಹಿಸೋಣ. |